ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 119 (75) |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಆರ್.ಬಿ ತಿಮ್ಮಾಪುರ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 13-12-2021 |
| 4) | ಉತ್ತರಿಸುವವರು | ಮಾನ್ಯ ಉನ್ನತ ಶಿಕ್ಷಣ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖಾ ಸಚಿವರು |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ). ಕಳೆದ ಮೂರು ವರ್ಷಗಳಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಮೀಸಲಿಟ್ಟ ಹಣವೆಷ್ಟು; ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; (ವಿವರಗಳನ್ನು ಒದಗಿಸುವುದು)</td><td>
<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ :</u>
ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಬಾಗಲಕೋಟೆ ಜಿಲ್ಲೆಗೆ ಪ್ರತ್ಯೇಕವಾಗಿ ಅನುದಾನವನ್ನು ಮೀಸಲು ಇಡಲಾಗಿರುವುದಿಲ್ಲ. ಅದಾಗ್ಯೂ, ತರಬೇತಿ ಸಂಸ್ಥೆಗಳ ತರಬೇತಿ ವೆಚ್ಚದ ಪಾವತಿಗಾಗಿ ಹಣವನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಮುಂದುವರೆದು 30 ಜಿಲ್ಲೆಗಳ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿಗಳ ಕಛೇರಿಯ ಸಿಬ್ಬಂದಿಗಳ ವೇತನ, ಉದ್ಯೋಗಮೇಳ ಹಾಗೂ ಇತರೆ ಆಡಳಿತಾತ್ಮಕ ವೆಚ್ಚಗಳಿಗಾಗಿ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.
ಕಳೆದ ಮೂರು ವರ್ಷಗಳಲ್ಲಿ ಬಾಗಲಕೋಟೆ ಜಿಲ್ಲೆಗೆ ಅನುದಾನ ಬಿಡುಗಡೆ ಮಾಡಿರುವ ಮಾಹಿತಿ ಈ ಕೆಳಕಂಡಂತಿದೆ.
<table>
<tr><th>ಆರ್ಥಿಕ ವರ್ಷ</th><th>ಬಿಡುಗಡೆ ಮಾಡಲಾದ ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>2017-18</td><td>16.00</td></tr>
<tr><td>2018-19</td><td>40.00</td></tr>
<tr><td>2019-20</td><td>57.00</td></tr>
<tr><td>2020-21</td><td>22.00</td></tr>
</table>
ಇದುವರೆವಿಗೂ ಒಟ್ಟಾರೆ ರೂ.135.00 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.
<u>ಸಿಡಾಕ್:</u>
ಬಾಗಲಕೋಟೆ ಜಿಲ್ಲೆಯಲ್ಲಿ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ಸಂಸ್ಥೆಯಿಂದ ಅನುಷ್ಠಾನಗೊಳಿಸುವ ತರಬೇತಿ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಹಣ ಹಾಗೂ ಖರ್ಚು ಮಾಡಿದ ಹಣದ ವಿವರ ಈ ಕೆಳಗಿನಂತಿದೆ.
<table>
<tr><th>ವರ್ಷ</th><th>ಮೀಸಲಿಟ್ಟ ಹಣ (ರೂ. ಲಕ್ಷಗಳಲ್ಲಿ)</th><th>ಖರ್ಚು ಮಾಡಲಾದ ಹಣ (ರೂ. ಲಕ್ಷಗಳಲ್ಲಿ)</th></tr>
<tr><td>2018-19</td><td>9.92</td><td>9.92</td></tr>
<tr><td>2019-20</td><td>4.10</td><td>4.10</td></tr>
<tr><td>2020-21</td><td>4.95</td><td>4.95</td></tr>
</table>
</td></tr>
</table>

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್.ಆರ್.ಎಲ್.ಎಂ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿ ಬಿಡುಗಡೆ ಮಾಡಿರುವ ಅನುದಾನದ ವಿವರ ಕೆಳಗಿನಂತಿದೆ.

- ಎನ್‌ಆರ್‌ಎಲ್‌ಎಂ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ

| ಕ್ರ.ಸಂ | ವರ್ಷ | ಮೀಸಲಿಟ್ಟ / ಬಿಡುಗಡೆ | ವೆಚ್ಚ |
|---|---|---|---|
| 1. | 2019-20 | 8,28,75,882 | 8,20,78,558 |
| 2. | 2020-21 | 2,51,26,837 | 2,39,95,084 |
| 3. | 2021-22 | 8,45,73,773 | 7,02,57,386 |

- ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿ ಅನುಷ್ಠಾನಗೊಳಿಸುತ್ತಿರುವ ದೀನ್ ದಯಾಳ್ ಉಪಾಧ್ಯಾಯಾ ಗ್ರಾಮೀಣ ಕೌಶಲ್ಯ ಯೋಜನೆಯು 60:40 ಅನುಪಾತ ಹೊಂದಿದ್ದು, ಕಾರ್ಯಕ್ರಮವನ್ನು ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಗತಿಗನುಸಾರ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಈ ಕಾರ್ಯಕ್ರಮದಡಿ ಕಳೆದ ಮೂರು ವರ್ಷಗಳಲ್ಲಿ ಬಾಗಲಕೋಟೆ ಜಿಲ್ಲೆಗೆ ಬಿಡುಗಡೆಯಾದ ಅನುದಾನದಡಿ ಅಂದಾಜು ರೂ.39.75 ಲಕ್ಷ ವೆಚ್ಚವಾಗಿದ್ದು, ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ತರಬೇತಿ ಹೊಂದಿದವರು | ಉದ್ಯೋಗ ಪಡೆದವರು | ತಗಲಿದ ವೆಚ್ಚ / ಅಭ್ಯರ್ಥಿ | ಒಟ್ಟು ವೆಚ್ಚ |
|---|---|---|---|
| 53 | 19 | 75,000 | 39.75 |

- ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮದಡಿ ಬಾಗಲಕೋಟೆ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಆರ್‌ಸೆಟಿ-ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರದಡಿ ಅನುಷ್ಠಾನಗೊಳಿಸಲಾಗುತ್ತಿದ್ದು, ಕಳೆದ ಮೂರು ವರ್ಷಗಳಲ್ಲಿ 2019-20ನೇ ಸಾಲಿನಲ್ಲಿ 649, 2020-21ನೇ ಸಾಲಿನಲ್ಲಿ 550 ಮತ್ತು 2021-22ನೇ ಸಾಲಿನಲ್ಲಿ 346 ಒಟ್ಟಾರೆಯಾಗಿ 1545 ಅಭ್ಯರ್ಥಿಗಳಿಗೆ ಸ್ವ-ಉದ್ಯೋಗ ಕಾರ್ಯಕ್ರಮದಡಿ ತರಬೇತಿ ನೀಡಲಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಬಾಗಲಕೋಟೆ ಜಿಲ್ಲೆಯ ಆರ್‌ಸೆಟಿ ತರಬೇತಿ ಕೇಂದ್ರಕ್ಕೆ ರೂ.18,87,688/-ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

| ಕ್ರ.ಸಂ | ವರ್ಷ | ಮೀಸಲಿಟ್ಟ/ ಬಿಡುಗಡೆ | ವೆಚ್ಚ |
|---|---|---|---|
| 1. | 2019-20 | 18,87,688 | 18,87,600 |
| 2. | 2020-21 | 0 | 0 |
| 3. | 2021-22 | 0 | 0 |

**ಡೇ-ನಲ್ಮ್:**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಮಂಜೂರಾದ ಅನುದಾನ ಮತ್ತು ವೆಚ್ಚ ಮಾಡಲಾದ ಅನುದಾನ ವಿವರ ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ಮಂಜೂರಾದ ಅನುದಾನ | ಬಿಡುಗಡೆ ಅನುದಾನ | ವೆಚ್ಚ ಮಾಡಲಾದ ಅನುದಾನ |
|---|---|---|---|---|
| 1 | 2018-19 | 155.25 | 22.00 | 1.55 |
| 2 | 2019-20 | 154.93 | 63.52 | 0.69 |
| 3 | 2020-21 | 106.08 | 10.60 | 0.62 |

(ಆ) ಸದರಿ ಜಿಲ್ಲೆಯಲ್ಲಿ ಇಲಾಖೆಯಿಂದ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆಯೇ;

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ :**

ಪ್ರಸ್ತುತ ನಿಗಮದಿಂದ ಯಾವುದೇ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡಿರುವುದಿಲ್ಲ.

**ಸಿಡಾಕ್:**

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ಸಂಸ್ಥೆಯಿಂದ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮ, ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮ, ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು ಹಾಗೂ ವಲಯಾಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್.ಆರ್.ಎಲ್.ಎಂ):**

- ಬಾಗಲಕೋಟೆ ಜಿಲ್ಲೆಯಲ್ಲಿ ಸದರಿ ತರಬೇತಿಗಳನ್ನು ದೀನ್ ದಯಾಳ್ ಉಪಾದ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಯೋಜನಾ ಅನುಷ್ಠಾನ ಸಂಸ್ಥೆ, ಮೆ// ಶಾಹಿ ಎಕ್ಸ್‌ಪೋರ್ಟ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಮೂಲಕ ಹಮ್ಮಿಕೊಳ್ಳಲಾಗುತ್ತಿದೆ.
- ಬಾಗಲಕೋಟೆ ಜಿಲ್ಲೆಯಲ್ಲಿ ಆರ್‌ಸೆಟಿ-ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರದಡಿ ಹಮ್ಮಿಕೊಂಡಿರುವ ತರಬೇತಿ ವಿವರ ಕೆಳಗಿನಂತಿದೆ.

| ಕ್ರ.ಸಂ | ವರ್ಷ | ತರಬೇತಿಗಳ ಸಂಖ್ಯೆ | ತರಬೇತಿ ಹೊಂದಿದ ಶಿಬಿರಾರ್ಥಿಗಳು |
|---|---|---|---|
| 1. | 2019-20 | 23 | 649 |
| 2. | 2020-21 | 20 | 550 |
| 3. | 2021-22 | 14 | 346 |

**ಡೇ-ನಲ್ಮ್:**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಡೇ-ನಲ್ಮ್ ಅಭಿಯಾನದ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪಘಟಕದಡಿ ಬಾಗಲಕೋಟೆ ಜಿಲ್ಲೆಯಲ್ಲಿ 208 ಫಲಾನುಭವಿಗಳಿಗೆ ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗಿರುತ್ತದೆ.

(ಇ) ಈ ಕಾರ್ಯಕ್ರಮದಡಿ ಎಷ್ಟು ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ ?
( ವಿಧಾನಸಭಾವಾರು ಮಾಹಿತಿಗಳನ್ನು ಒದಗಿಸುವುದು)

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ :**

ಮೇಲ್ಕಂಡ ತರಬೇತಿ ಕಾರ್ಯಕ್ರಮದಡಿ ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟಾರೆ 381 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ.

**ಸಿಡಾಕ್:**

| ಕ್ರಮ ಸಂಖ್ಯೆ | ಮತಕ್ಷೇತ್ರ | ಅಭ್ಯರ್ಥಿಗಳ ಸಂಖ್ಯೆ 2018-19 | ಅಭ್ಯರ್ಥಿಗಳ ಸಂಖ್ಯೆ 2019-20 | ಅಭ್ಯರ್ಥಿಗಳ ಸಂಖ್ಯೆ 2020-21 |
|---|---|---|---|---|
| 01 | ಬಾಗಲಕೋಟೆ | 8 | 17 | - |
| 02. | ಬೀಳಗಿ | - | - | - |
| 03. | ಬಾದಾಮಿ | 1 | 2 | - |
| 04. | ಹುನಗುಂದ | - | 3 | - |
| 05. | ಮುಧೋಳ | - | 3 | 13 |
| 06. | ಜಮಖಂಡಿ | - | 1 | 6 |
| 07. | ತೇರದಾಳ | - | 2 | 1 |

ಡೇ-ನಲ್ಮ್:

ಬಾಗಲಕೋಟೆ ಜಿಲ್ಲೆಗೆ ಅಭಿಯಾನದಡಿ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ಉದ್ಯೋಗವಕಾಶವನ್ನು ಪಡೆದುಕೊಂಡ ಫಲಾನುಭವಿಗಳ ಸಂಖ್ಯೆಯ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಫಲಾನುಭವಿಗಳ ಸಂಖ್ಯೆ | |
|---|---|---|---|
| | | 2020-21 | 2021-22 |
| 1 | ಅಮೀನ್‌ಗಡ | 0 | 0 |
| 2 | ಬಾದಾಮಿ | 0 | 2 |
| 3 | ಬಾಗಲಕೋಟೆ | 6 | 5 |
| 4 | ಬೆಳಗಲಿ | 0 | 0 |
| 5 | ಬೀಳಗಿ | 0 | 0 |
| 6 | ಗುಳೆದಗುಡ್ಡ | 0 | 0 |
| 7 | ಹುನಗುಂದ | 0 | 0 |
| 8 | ಇಳಕಲ್ | 5 | 2 |
| 9 | ಜಮಖಂಡಿ | 11 | 0 |
| 10 | ಕಮತಗಿ | 0 | 0 |
| 11 | ಕೆರೂರು | 1 | 0 |
| 12 | ಮಹಾಲಿಂಗಪುರ | 0 | 0 |
| 13 | ಮುಧೋಳ | 0 | 0 |
| 14 | ರಬಕವಿ ಬನಹಟ್ಟಿ | 0 | 0 |
| 15 | ತೇರದಾಳ | 0 | 0 |

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್.ಆರ್.ಎಲ್.ಎಂ):

- ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯು ಉದ್ಯೋಗಾಕಾಂಕ್ಷಿಗಳಿಂದ ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿರುವ ಕಾರಣ ವಿಧಾನ ಸಭಾವಾರು ಮಾಹಿತಿ ಲಭ್ಯವಿರುವುದಿಲ್ಲ. ಜಿಲ್ಲೆಯಲ್ಲಿ ಒಟ್ಟಾರೆ 53 ಅಭ್ಯರ್ಥಿಗಳು ತರಬೇತಿಯನ್ನು ಹೊಂದಿರುತ್ತಾರೆ. ಸದರಿ ಯೋಜನೆಯಡಿ ಒಟ್ಟು 19 ಅಭ್ಯರ್ಥಿಗಳಿಗೆ ಉದ್ಯೋಗ ಕಲ್ಪಿಸಲಾಗಿದೆ.
- ಆರ್‌ಸೆಟಿ ಯೋಜನೆಯಡಿ ಸ್ವ-ಉದ್ಯೋಗ ತರಬೇತಿಗಳನ್ನು ಮಾತ್ರ ನೀಡಲಾಗುತ್ತಿದೆ.

ಸಂಖ್ಯೆ: ಕೌಉಜೀಇ 64 ಉಜೀಪ್ರ 2021

(ಡಾ|| ಸಿ.ಎನ್. ಅಶ್ವಥ್‌ನಾರಾಯಣ)
ಮಾನ್ಯ ಉನ್ನತ ಶಿಕ್ಷಣ, ವಿದ್ಯುನ್ಮಾನ,
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.